Online Newspaper Clipping Service
Dated, Friday 24th, March – 2017

DECCAN HERALD

Pg.No.05

KEA to hold counselling for PG medical, dental seats of all colleges

BENGALURU: Karnataka Examinations Authority will conduct centralised counselling for post-graduate medical and dental courses for 2017-18 across all categories including those in government, private, minority and deemed university colleges.

Participating in a discussion on a Bill in the Assembly, Medical Education Minister Sharan Prakash Patil said KEA has developed a software for centralised counselling and it will be based on marks scored in the National Eligibility cum Entrance Test (NEET). Hitherto, counselling was conducted by multiple agencies. While KEA conducted counselling for government quota seats,Comed-K conducted the process for seats in non-minority professional colleges and Karnataka Religious and Linguistic Minority Private Colleges Association (KRLMPCA) for seats in minority colleges.

Patil said the Karnataka Professional Educational Institutional (Regulation of Admission and Determination of fee) (Amendment) Bill, 2017 will pave way for centralised counselling.

The Bill provides for reserving 30% seats for Karnataka students in professional colleges, the minister said. The Bill was passed by voice vote.

Patil said he is in talks with deemed universities to provide 25% seats for students from the state at concessional fees.

The state government will also contemplate enacting a law with a provision that only students who have studied in Karnataka can apply for PG medical and dental colleges in the state from 2018-19. A similar initiative was struck down by the Supreme Court in 2014, he added.

Bill to curb leak

A Bill that proposes to declare question paper leak a serious criminal offence with a penal clause of three years' imprisonment (for the first offence) was also passed by the Assembly. The Council had passed the Bill with some amendments last week. The Bill also defines question paper, leakage of question paper and malpractice so that there is no ambiguity while prosecuting those indulging in paper leaks.The provisions of the Bill will be applicable to examinations conducted by Karnataka Secondary Education Examination Board (KSEEB) and Pre-University Department.

DH News Service

THE TIMES OF INDIA

Professional admissions to stay with state govt?

TIMES NEWS NETWORK

Bengaluru: The Karnataka government will take control over the Consortium of Medical Engineering and Dental Colleges of Karnataka (Comed-K), deemed universities and minority colleges, and restrict them from conducting common entrance tests. The assembly passed a Bill to this effect on Thursday, to amend the Karnataka Professional Educational Institutions (Regulation of Admission and Determination of Fee) Act, 2006.

"The government will have sole control over allotment of all medical and dental seats in the state, and the power to conduct common counselling even if private educational institutions disagree to the annual consensual agreement with the state government," medical education minister Sharan Prakash Patil told the assembly.

WHAT'S COMING

- Conduct of Common Entrance Test by the state government
- In case Centre or its agency conducts CET, ranking of candidates will be obtained from such CET
- If private institutions have an agreement with govt, conduct of CET in accordance with that pact
- State govt to frame rules to conduct centralized counselling

The Karnataka Professional Educational Institutions (Regulation of Admission and Determination of Fee) Amendment Bill, 2017, seeks to scrap all other entrance exams to professional courses, including Comed-K and private university exams. "Hitherto, Comed-K, deemed universities and minority colleges were conducting separate tests and counselling for their seats. Only counselling for government-quota seats was held by the government," Patil said.

While the amendment covers all courses, the government will initially introduce the new Act for medical and dental courses, in the backdrop of the National Eligibility Cum Entrance Test becoming mandatory.

▶Continued on page 6

THE TIMES OF INDIA

'Pvt professional colleges will explore legal options'

▶ Continued from page 1

Though the amendment is being brought in to be in sync with NEET, that was rolled out last year, a source in the government feels it may not be a smooth run, given the fact that the private professional college cartel is mostly controlled by political leaders. The Centre recently announced "all kinds of medical institutes and even seats under the management quota must be submitted to the state government for counselling and common admission".

A senior IAS officer said: "The government's intention to take control of CET is unlikely to be smooth, given that private professional colleges will explore legal options."

Varsity status bill withdrawn

The government withdrew a bill to accord university status to the Institute of Trans-Disciplinary Health Sciences and Technology in Bengaluru, after the opposition BJP raised strong apprehensions. Health minister K R Ramesh Kumar said he would re-introduce the Bill.

Docs to renew licence in 5 yrs

Now on, every medical practitioner will have to renew registration by paying a prescribed fee to the Medical Council, once in five years.

Age limit for V-Cs extended

The Karnataka Samskrita Vishwavidyalaya (Amendment) Bill was passed to increase the upper age limit to hold the office of vice-chancellor to 67 years.

THE HINDU

NRI quota enhanced by 5% in minority colleges

STAFF REPORTER
BENGALURU

In a move that could affect the chances of other students aspiring for medical and dental seats in minority colleges, the Non-Resident Indian (NRI) and management quotas have been enhanced by 5%. With this, the management and NRI quotas for postgraduate seats in minority colleges stand at 25%.

This means that now 55% of the seats will be filled through examinations conducted by minority colleges' association instead of 60%.

"This is bad news for us as the NRI and management quota seats are of higher fees and are not accessible to non-NRI students," said Shilpa G., a medical seat aspirant.

As reported by *The Hindu* on Wednesday, all educational institutions will now have to reserve 30% seats for Karnataka students. This is in addition to government-quota seats that are already being given by unaided and minority institutions.

Meanwhile, Medical Education Minister Sharanprakash R. Patil said he had held a meeting with representatives of several deemed universities and urged them to give 25% of medical and dental seats to the government-quota pool under the consensual agreement. "They said they would have a meeting, and come back for another round of meeting with the State government," he said.

THE HINDU

Common counselling for PG medical courses from this year

SPECIAL CORRESPONDENT
BENGALURU

Karnataka will have a common counselling system for postgraduate medical and dental courses from this academic year unlike the present practice of multiple counselling by government, private and deemed universities. The State Assembly on Thursday adopted the Karnataka Professional Educational Institutions (Regulation of Admission and Determination of Fee) (Amendment) Bill.

Piloting the Bill, Medical Education Minister Sharanprakash R. Patil said there will be common counselling by the government, COMEDK and deemed universities to prevent inconvenience to students. The Bill also seeks to earmark 30% of seats in unaided minorities' colleges for students from Karnataka. In addition to this, consultations were being held with deemed universities to get 25% concessional seats for students of the State, he noted. Responding to a demand by members to reserve postgraduate medical seats for only students from Karnataka, Mr. Patil said the Supreme Court had earlier struck down such a move. However, he would hold consultations again with legal experts to see if it could be implemented.

The Assembly also adopted the Karnataka Labour Welfare Fund (Amendment) Bill which seeks to increase the rate of contribution of employees, employers and government to the labour welfare fund. The House also approved a Bill seeking to increase the retirement age of the V-C of Karnataka Sanskrit University from 65 to 67 years.

Minister halts Bill

SPECIAL CORRESPONDENT
BENGALURU

In a rare gesture, Health Minister K.R. Ramesh Kumar decided against moving a Bill for consideration just following concerns expressed by a lone member.

BJP member Vishweshwar Hegde Kageri expressed concern about the Institute of Trans-Disciplinary Health Sciences and Technology (Amendment) Bill, stating that granting university status to the institute may result in government interference and unwanted lobbying for the Vice-Chancellor's post. Though members of the Opposition wanted the Minister to go ahead with the Bill, Mr. Kumar made it clear that he would wait till the next session to address the concerns expressed by the member.

THE NEW INDIAN EXPRESS

Bill for conducting NEET passed

EXPRESS NEWS SERVICE
@Bengaluru

THE Assembly on Thursday passed the Karnataka Professional Educational Institutions (Regulation of Admission and Determination of Fee) (Amendment) Bill, 2017, to enable conducting the National Eligibility cum Entrance Test (NEET) for admissions to medical and dental courses from the coming academic year.

The Bill also provides for the government to conduct centralised counselling based on NEET guidelines and includes private or deemed universities in the definition of 'professional educational institutions'.

With the passing of the Bill, the Karnataka Examinations Authority (KEA) will not conduct the Common Entrance Test (CET) for admissions to medical and dental courses.

The Bill provides for framing of rules by the state government for conducting centralised counselling by it or by such agency in such a manner as may be prescribed.

ಸಂಯುಕ್ತ ಕರ್ನಾಟಕ

ಖಾಸಗಿ ವೈದ್ಯ ಕಾಲೇಜು ರಾಜ್ಯ ವಿದ್ಯಾರ್ಥಿಗಳ ಹಿತಕ್ಕೆ ಬದ್ಧ

ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಸ್ನಾತಕೋತ್ತರ ವಿಭಾಗಕ್ಕೆ ಪ್ರವೇಶ ಬಯಸುವ ರಾಜ್ಯದ ವಿದ್ಯಾರ್ಥಿಗಳ ಹಿತಾಸಕ್ತಿಯನ್ನು ಕಾಪಾಡುವ 'ಕರ್ನಾಟಕ ವೃತ್ತಿಪರ ಶಿಕ್ಷಣ ಸಂಸ್ಥೆಗಳ ಪ್ರವೇಶ ನಿಯಂತ್ರಣ ಹಾಗೂ ಶುಲ್ಕ ನಿರ್ಣಯ ವಿಧೇಯಕ'ವನ್ನು ವಿಧಾನಸಭೆ ಗುರುವಾರ ಅನುಮೋದಿಸಿತು.

ವಿಧೇಯಕದಿಂದ ಕರ್ನಾಟಕದ ವಿದ್ಯಾರ್ಥಿಗಳಿಗೆ ಎಂ.ಡಿ, ಎಂ.ಎಸ್ ಮೊದಲಾದ ಸ್ನಾತಕೋತ್ತರ ವಿಭಾಗಗಳಲ್ಲಿ ಹೆಚ್ಚಿನ ಸೀಟುಗಳು ದೊರೆಯುತ್ತವೆ ಎಂದು ವಿಧೇಯಕವನ್ನು ಮಂಡಿಸಿದ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ ಹೇಳಿದರು.

ವಿಧೇಯಕದಿಂದ ರಾಜ್ಯದ ವಿದ್ಯಾರ್ಥಿಗಳಿಗೆ ಪ್ರಯೋಜನವಾಗಿ, ನಮ್ಮ ವಿದ್ಯಾರ್ಥಿಗಳಿಗೆ ಹೆಚ್ಚಿನ ಸೀಟುಗಳು ದೊರೆಯುವಂತೆ ನೋಡಿಕೊಳ್ಳಬೇಕು ಎಂದು ಬಿಜೆಪಿಯ ಡಾ. ಅಶ್ವತ್ಥನಾರಾಯಣ, ಸಿ.ಟಿ.ರವಿ, ಸುರೇಶಕುಮಾರ ಮತ್ತಿತರು ಒತ್ತಾಯಿಸಿದರು. ಪಿ.ರಾಜೀವ್, ಡಾ.ರಫೀಕ್ ಅಹಮದ್, ಗುರು ಪಾಟೀಲ ಮೊದಲಾದವರೂ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು.ಸದಸ್ಯರ ಭಾವನೆಗಳಿಗೆ ಪ್ರತಿಕ್ರಿಯಿಸಿದ ಸಚಿವ ಶರಣಪ್ರಕಾಶ ಪಾಟೀಲ, ವಿಧೇಯಕದಿಂದ ಕರ್ನಾಟಕ ವಿದ್ಯಾರ್ಥಿಗಳ ಹಿತವನ್ನು ಕಾಪಾಡುವಂತೆ ನಿಯಮಗಳನ್ನು ರೂಪಿಸಲಾಗಿದೆ ಎಂದು ಸ್ಪಷ್ಟಪಡಿಸಿದರು.

'ಇನ್ನು ಮುಂದೆ ರಾಜ್ಯದ ಸ್ವಾಯತ್ತ ವೈದ್ಯಕೀಯ ವಿಶ್ವವಿದ್ಯಾಲಯಗಳು ಹಾಗೂ ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ರಾಜ್ಯದ ವಿದ್ಯಾರ್ಥಿಗಳಿಗೆ ಶೇಕಡಾ 55ರಷ್ಟು ಸೀಟುಗಳು ದೊರೆಯುವಂತೆ ಸರ್ಕಾರ ಒತ್ತಡ ಹೇರಲಿದೆ' ಎಂದು ತಿಳಿಸಿದರು.

ನೀಟ್: ಸ್ಥಳೀಯ ವಿದ್ಯಾರ್ಥಿಗಳ ಪರ ವಿಧೇಯಕ ಪಾಸ್

ಬೆಂಗಳೂರು: ವೈದ್ಯ, ದಂತ ವೈದ್ಯ ಕೋರ್ಸ್‌ಗಳ ಏಕರೂಪ ಪ್ರವೇಶ ಪರೀಕ್ಷೆಗೆ ಪೂರಕವಾಗಿ ಸೀಟು ಹಂಚಿಕೆಗೆ ಅವಕಾಶ ಕಲ್ಪಿಸುವ ಮತ್ತು ರಾಜ್ಯದ ಪ್ರತಿಭಾವಂತ ವಿದ್ಯಾರ್ಥಿಗಳ ಹಿತರಕ್ಷಣೆಗೆ ಸಹಾಯಕವಾಗುವ 'ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ತಿದ್ದುಪಡಿ) ವಿಧೇಯಕ - 2017'ಕ್ಕೆ ವಿಧಾನ ಸಭೆಯಲ್ಲಿ ಗುರುವಾರ ಅಂಗೀಕಾರ ನೀಡಲಾಯಿತು.

ಪರೀಕ್ಷಾ ಪ್ರಾಧಿಕಾರಕ್ಕೆ ವೈದ್ಯ, ದಂತ ವೈದ್ಯ ಸೀಟು ಹಂಚಿಕೆ ಹೊಣೆ

ವೈದ್ಯ, ದಂತ ವೈದ್ಯ ಪದವಿ ಮತ್ತು ಸ್ನಾತಕೋತ್ತರ ಪದವಿಗೆ ರಾಷ್ಟ್ರೀಯ ಅರ್ಹತೆ ಮತ್ತು ಪ್ರವೇಶ ಪರೀಕ್ಷೆ (ನೀಟ್) ನಡೆಸಲಾಗುತ್ತಿದೆ. ಇದು ಇಡೀ ದೇಶದಲ್ಲಿ ನಡೆಯುವ ಏಕರೂಪ ಪರೀಕ್ಷಾ ವಿಧಾನವಾಗಿದ್ದು, ವೈದ್ಯ ಕೋರ್ಸ್‌ಗಳಿಗೆ ಹತ್ತಾರು ಪ್ರವೇಶ ಪರೀಕ್ಷೆ ಬರೆಯುವುದು ತಪ್ಪಲಿದೆ.

ಈ ಪರೀಕ್ಷೆ ಬಳಿಕ ರಾಜ್ಯದಲ್ಲಿ ಇಲ್ಲಿನ ಪರೀಕ್ಷಾ ಪ್ರಾಧಿಕಾರವೇ (ಕೆಇಎ) ಸೀಟು ಹಂಚಿಕೆ ಮಾಡಲಿದೆ. ಅಂದರೆ, ಕಾಮೆಡ್-ಕೆ, ಅಲ್ಪಸಂಖ್ಯಾತ ಸಂಸ್ಥೆಗಳು ಹಾಗೂ ಡೀಮ್ಡ್ ವಿವಿಗಳಿಂದ ಪ್ರತ್ಯೇಕ ಕೌನ್ಸೆಲಿಂಗ್ ವಿಧಾನ ಇರುವುದಿಲ್ಲ. ಈ ಎಲ್ಲ ಹೊಣೆಯನ್ನೂ ಪ್ರಾಧಿಕಾರವೇ ನಿಭಾಯಿಸಲಿದೆ. ಈ ಪ್ರಕ್ರಿಯೆ ಕೈಗೊಳ್ಳಲು ಸಂಬಂಧಿತ ಸಂಸ್ಥೆಗಳೊಂದಿಗೆ ಹಾಲಿ ವ್ಯವಸ್ಥೆಯಂತೆಯೇ ಪ್ರಾಧಿಕಾರವು ಸರ್ವಸಮ್ಮತ ಅಭಿಪ್ರಾಯದ ಒಪ್ಪಂದ ಮಾಡಿಕೊಳ್ಳಲಿದೆ. ಹಾಲಿ ವಿಧೇಯಕವು ಈ ಉದ್ದೇಶಕ್ಕೆ ಅನುವು ಮಾಡಿಕೊಡಲಿದೆ.

ಉದಯವಾಣಿ

ವೈದ್ಯ, ದಂತವೈದ್ಯ ಪ್ರವೇಶಕ್ಕೆ ಏಕರೂಪ ಕೌನ್ಸೆಲಿಂಗ್

■ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕವೇ ಕೌನ್ಸೆಲಿಂಗ್ ■ ವಿದ್ಯಾರ್ಥಿಗಳಿಗೆ ಆಗುತ್ತಿರುವ ತೊಂದರೆ ತಪ್ಪಿಸಲು ಈ ಕ್ರಮ

ವಿಧಾನಸಭೆ: ದೇಶಾದ್ಯಂತ ವೈದ್ಯ ಮತ್ತು ದಂತವೈದ್ಯ ಕೋರ್ಸ್‌ಗಳಿಗೆ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ (ನೀಟ್) ನಡೆಯುತ್ತಿರುವ ಹಿನ್ನೆಲೆಯಲ್ಲಿ ರಾಜ್ಯದ ಖಾಸಗಿ, ಅಲ್ಪಸಂಖ್ಯಾತ ಸೇರಿ ಎಲ್ಲ ವೈದ್ಯ ಮತ್ತು ದಂತವೈದ್ಯ ಕಾಲೇಜುಗಳಿಗೆ ರಾಜ್ಯ ಸರ್ಕಾರದಿಂದಲೇ ಏಕರೂಪದ ಕೌನ್ಸೆಲಿಂಗ್ ನಡೆಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಅಲ್ಲದೆ, ಖಾಸಗಿ ವೈದ್ಯ ಕಾಲೇಜುಗಳ ಇನ್ ಸ್ಟಿಟ್ಯೂಷನ್ ಕೋಟಾದ ಶೇ. 30ರಷ್ಟು ಸೀಟುಗಳನ್ನು ರಾಜ್ಯದ ವಿದ್ಯಾರ್ಥಿಗಳಿಗೆ ಮೀಸಲಿಡಲು ತೀರ್ಮಾನಿಸಲಾಗಿದೆ.

ಈ ನಿಟ್ಟಿನಲ್ಲಿ ಕರ್ನಾಟಕ ವೃತ್ತಿಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ತಿದ್ದುಪಡಿ) ವಿಧೇಯಕ-2017ಕ್ಕೆ ವಿಧಾನ ಸಭೆಯಲ್ಲಿ ಸರ್ವಾನುಮತದ ಒಪ್ಪಿಗೆ ನೀಡಲಾಗಿದೆ. ವಿಧೇಯಕಕ್ಕೆ ವಿಧಾನ ಪರಿಷತ್ತಿನಲ್ಲಿ ಒಪ್ಪಿಗೆ ಸಿಕ್ಕಿದ ಬಳಿಕ 2017-18ನೇ ಸಾಲಿನಿಂದಲೇ ಹೊಸ ಕೌನ್ಸೆಲಿಂಗ್ ವ್ಯವಸ್ಥೆ ಜಾರಿಗೆ ಬರಲಿದೆ.

ವಿಧೇಯಕವನ್ನು ಗುರುವಾರ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ಅವರು ಪರ್ಯಾಲೋಚನೆಗೆ ಮಂಡಿಸಿದ್ದು ಈ ಕುರಿತು ಸುದೀರ್ಘ ಸಮಾಲೋಚನೆ ನಡೆಸಿದ ಬಳಿಕ ಸದನ ಧ್ವನಿಮತದಿಂದ ವಿಧೇಯಕವನ್ನು ಅಂಗೀಕರಿಸಿತು. ಅದರಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಮೂಲಕವೇ ಕೌನ್ಸೆಲಿಂಗ್ ನಡೆಸಲಾಗುತ್ತದೆ.



■ ತೊಂದರೆ ತಪ್ಪಿಸಲು ಈ ಕ್ರಮ: ಈ ವಿಧೇಯಕದ ಅನ್ವಯ ಪ್ರಸ್ತುತ ದೇಶಾದ್ಯಂತ ವೈದ್ಯ ಮತ್ತು ದಂತವೈದ್ಯ ಕೋರ್ಸ್‌ಗಳಿಗೆ ನೀಟ್ ಆಯೋಜಿಸಲಾಗುತ್ತಿದೆ. ಆದರೆ, ಕಳೆದ ವರ್ಷ ಸರ್ಕಾರಿ ಮತ್ತು ಖಾಸಗಿ ಕಾಲೇಜುಗಳಿಗೆ ಪ್ರತ್ಯೇಕ ಕೌನ್ಸೆಲಿಂಗ್ ನಡೆಸಲಾಗಿತ್ತು. ಇದರಿಂದ ವಿದ್ಯಾರ್ಥಿಗಳಿಗೆ ಆಗುತ್ತಿರುವ ತೊಂದರೆ ತಪ್ಪಿಸಲು ಏಕರೂಪದ ಕೌನ್ಸೆಲಿಂಗ್ ನಡೆಸಲಾಗುತ್ತದೆ.

ಜತೆಗೆ ಸರ್ಕಾರಿ ವೈದ್ಯ ಮತ್ತು ದಂತ ವೈದ್ಯ ಕಾಲೇಜುಗಳಲ್ಲಿ ರಾಜ್ಯದ ಅಭ್ಯರ್ಥಿಗಳಿಗೆ ಲಭ್ಯವಾಗುವ ಶೇ. 50ರಷ್ಟು ಸೀಟುಗಳ ಜತೆಗೆ ಖಾಸಗಿ ಕಾಲೇಜುಗಳ ಶೇ. 30ರಷ್ಟು ಇನ್‌ಸ್ಟಿಟ್ಯೂಷನಲ್ ಸೀಟುಗಳಲ್ಲಿ ಶೇ. 30ರಷ್ಟನ್ನು ರಾಜ್ಯದ ವಿದ್ಯಾರ್ಥಿಗಳಿಗೆ ಮೀಸಲಿಡಲಾಗುತ್ತದೆ.

ಖಾಸಗಿ ಕಾಲೇಜುಗಳೊಂದಿಗೆ ಸರ್ಕಾರ ಪ್ರತಿವರ್ಷ ಮಾಡಿಕೊಳ್ಳುವ ಸೀಟುಹಂಚಿಕೆ ಒಪ್ಪಂದ ಈ ಬಾರಿಯೂ ಮುಂದುವರಿಯಲಿದೆ. ಇದರೊಂದಿಗೆ ಖಾಸಗಿ ಕಾಲೇಜುಗಳಲ್ಲಿ (ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು) ಶೇ. 30ರಷ್ಟು ಹೆಚ್ಚುವರಿ ಸೀಟುಗಳು ರಾಜ್ಯದ ವಿದ್ಯಾರ್ಥಿಗಳಿಗೆ ಲಭ್ಯವಾಗುವುದರಿಂದ ಸರ್ಕಾರಿ ವೈದ್ಯ ಮತ್ತು ದಂತ ವೈದ್ಯ ಕಾಲೇಜುಗಳಲ್ಲಿ ರಾಜ್ಯದ ವಿದ್ಯಾರ್ಥಿಗಳಿಗೆ ಸೀಟುಗಳ ಸಂಖ್ಯೆ ಕಡಿಮೆಯಾದರೂ ಅದಕ್ಕಿಂತ ಹೆಚ್ಚಿನ ಸೀಟುಗಳು ಖಾಸಗಿ ಕಾಲೇಜುಗಳಲ್ಲಿ ರಾಜ್ಯದ ವಿದ್ಯಾರ್ಥಿಗಳಿಗೆ ಲಭ್ಯವಾಗಲಿದೆ.

ಇದಲ್ಲದೆ, ಡೀಮ್ಡ್ ವಿಶ್ವವಿದ್ಯಾಲಯಗಳಲ್ಲೂ ರಾಜ್ಯ ಸರ್ಕಾರದಿಂದಲೇ ಕೌನ್ಸೆಲಿಂಗ್ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಇನ್‌ಸ್ಟಿಟ್ಯೂಷನಲ್ ಕೋಟಾದ ಶೇ. 25ರಷ್ಟು ಸೀಟುಗಳನ್ನು ರಾಜ್ಯದ ವಿದ್ಯಾರ್ಥಿಗಳಿಗೆ ನೀಡುವ ಕುರಿತು ಡೀಮ್ಡ್ ವಿವಿ ಮುಖ್ಯಸ್ಥರೊಂದಿಗೆ ಚರ್ಚೆ ನಡೆಸಲಾಗುತ್ತಿದೆ ಎಂದು ಸಚಿವ ಶರಣಪ್ರಕಾಶ್ ಪಾಟೀಲ್ ತಿಳಿಸಿದರು.

ಈ ಸಂದರ್ಭದಲ್ಲಿ ಶಾಸಕರಾದ ರಫೀಕ್ ಅಹ್ಮದ್, ಸಿ.ಎನ್.ಅಶ್ವತ್ಥನಾರಾಯಣ, ಸಿ.ಟಿ.ರವಿ, ರಾಜೀವ್, ಗುರು ಪಾಟೀಲ್, ಎಸ್.ಸುರೇಶ್ ಕುಮಾರ್ ಅವರು ಕೆಲವೊಂದು ಅನುಮಾನಗಳನ್ನು ವ್ಯಕ್ತಪಡಿಸಿದಾಗ ಪ್ರತಿಕ್ರಿಯಿಸಿದ ಸಚಿವರು, ಸರ್ಕಾರಿ ಕೋಟಾದ ಸೀಟುಗಳು ಮತ್ತು ರಾಜ್ಯದ ವಿದ್ಯಾರ್ಥಿಗಳಿಗೆ ಅನ್ಯಾಯವಾಗದಂತೆ ಕೌನ್ಸೆಲಿಂಗ್ ವ್ಯವಸ್ಥೆ ಮಾಡಲಾಗಿದೆ ಎಂದರು.

ರಾಜ್ಯದಲ್ಲಿ ಪ್ರಸ್ತುತ ಶುಲ್ಕ ನಿಯಂತ್ರಣ ಸಮಿತಿ ನಿರ್ಧರಿಸುವ ಶುಲ್ಕಗಳನ್ನು ಖಾಸಗಿ ವೈದ್ಯ, ದಂತ ವೈದ್ಯ ಕಾಲೇಜುಗಳು ವಿಧಿಸುತ್ತಿಲ್ಲ. ಮೇಲಾಗಿ ಸರ್ಕಾರ ನಿಗದಿಪಡಿಸಿದ ಶುಲ್ಕವನ್ನೇ ಪಡೆಯುತ್ತವೆ. ಹೀಗಾಗಿ ಇತರೆ ರಾಜ್ಯಗಳಿಗೆ ಹೋಲಿಸಿದರೆ ಖಾಸಗಿ ಕಾಲೇಜುಗಳ ಶುಲ್ಕವೂ ಕಡಿಮೆಯಿದೆ ಎಂದರು.

■ ವಿಶೇಷ ಸಾಫ್ಟ್‌ವೇರ್: ಉಳಿದಂತೆ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳ ಕೋಟಾವನ್ನು ಖಾಸಗಿ ಶಿಕ್ಷಣ ಸಂಸ್ಥೆಗಳ ಕೋಟಾದಂತೆ ಶೇ. 20ರಿಂದ ಶೇ. 25ಕ್ಕೆ ಹೆಚ್ಚಿಸಲು ಅವಕಾಶ ಮಾಡಿಕೊಡಲಾಗಿದೆ. ಏಕರೂಪದ ಕೌನ್ಸೆಲಿಂಗ್ ಈಗಾಗಲೇ ಕೆಇಎ ವಿಶೇಷ ಸಾಫ್ಟ್‌ವೇರ್ ಸಿದ್ಧಪಡಿಸಿದೆ. ಅದರಲ್ಲಿ ಆಯಾ ಶಿಕ್ಷಣ ಸಂಸ್ಥೆಗಳ ಕೋಟಾ, ಸರ್ಕಾರಿ ಕೋಟಾ ಮತ್ತು ಇನ್‌ಸ್ಟಿಟ್ಯೂಷನಲ್ ಕೋಟಾ, ಅನಿವಾಸಿ ಭಾರತೀಯ ಕೋಟಾ ಮುಂತಾದ ಅಂಶಗಳನ್ನು ಸೇರಿಸಲಾಗಿದೆ ಎಂದು ವಿವರಿಸಿದರು.

ಡೀಮ್ಡ್ ವಿ.ವಿಗಳಲ್ಲಿ ಶುಲ್ಕ ಹೆಚ್ಚಿರುವುದು ಸತ್ಯ • 'ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ ತಿದ್ದುಪಡಿ ಮಸೂದೆ' ಅಂಗೀಕಾರ

ಕೇಂದ್ರೀಕೃತ ಕೌನ್ಸೆಲಿಂಗ್, ಕನ್ನಡಿಗರಿಗೆ ಶೇ 50ರಷ್ಟು ಸೀಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್‌ಗಳ ಪ್ರವೇಶದಲ್ಲಿ ರಾಜ್ಯದ ವಿದ್ಯಾರ್ಥಿಗಳಿಗೆ ಶೇ 50ರಷ್ಟು ಸೀಟು ಮೀಸಲಿಡಲು ಅವಕಾಶ ಕಲ್ಪಿಸುವ 'ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ ತಿದ್ದುಪಡಿ ಮಸೂದೆ' ವಿಧಾನಸಭೆಯಲ್ಲಿ ಗುರುವಾರ ಅಂಗೀಕಾರಗೊಂಡಿತು.

ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ ಪಾಟೀಲ ಮಸೂದೆ ಮಂಡಿಸಿ, 'ಇನ್ನು ಮುಂದೆ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ರಾಜ್ಯ ಸರ್ಕಾರ, ಖಾಸಗಿ ಸಂಸ್ಥೆಗಳು ಪ್ರತ್ಯೇಕ ಸಿಇಟಿ ಪರೀಕ್ಷೆ ನಡೆಸುವುದಿಲ್ಲ. ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ (ಎನ್‌ಇಇಟಿ) ಮಾತ್ರ ನಡೆಯುತ್ತದೆ' ಎಂದು ಸ್ಪಷ್ಟಪಡಿಸಿದರು.

'ನೀಟ್ ಅಡಿ ಮೆರಿಟ್ ಆಧಾರದಲ್ಲಿ ರಾಜ್ಯಕ್ಕೆ ಲಭ್ಯವಾಗುವ ಒಟ್ಟು ಸೀಟುಗಳಲ್ಲಿ ಶೇ 50ರಷ್ಟನ್ನು ಕನ್ನಡಿಗರಿಗೆ ಮತ್ತು ಉಳಿದ ಶೇ50ರಷ್ಟು ಸೀಟುಗಳನ್ನು ಅಖಿಲ ಭಾರತ ಕೋಟಾಕ್ಕೆ ನೀಡಲು ಈ ಮಸೂದೆ ಅವಕಾಶ ಕಲ್ಪಿಸಲಿದೆ. ಸರ್ಕಾರಿ, ಖಾಸಗಿ, ಡೀಮ್ಡ್ ಮತ್ತು ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳ ಸೀಟುಗಳ ಭರ್ತಿಗೆ ಇನ್ನು ಮುಂದೆ ಕೇಂದ್ರೀಕೃತ ಕೌನ್ಸೆಲಿಂಗ್ ನಡೆಯಲಿದೆ. ಖಾಸಗಿ ಸಂಸ್ಥೆಗಳು ಶೇ 30ರಷ್ಟು ಸೀಟುಗಳನ್ನು ರಾಜ್ಯದ ವಿದ್ಯಾರ್ಥಿಗಳಿಗೆ ನೀಡಬೇಕು. ಇದರಿಂದ ಪಾರದರ್ಶಕತೆ ಕಾಯ್ದುಕೊಳ್ಳಲು ಸಾಧ್ಯವಾಗಲಿದೆ' ಎಂದರು.

ಬಿಜೆಪಿಯ ಡಾ. ಅಶ್ವತ್ಥ ನಾರಾಯಣ, ಸಿ.ಟಿ. ರವಿ, ಸುರೇಶ್‌ಕುಮಾರ್, ಕಾಂಗ್ರೆಸ್‌ನ ರಫೀಕ್ ಅಹ್ಮದ್, ಬಿಎಸ್‌ಆರ್ ಕಾಂಗ್ರೆಸ್ ಪಕ್ಷದ ಕೆ. ರಾಜೀವ್ ಮಾತನಾಡಿ, 'ವೈದ್ಯಕೀಯ ಮತ್ತು ದಂತ ವೈದ್ಯಕೀಯ ಸ್ನಾತಕೋತ್ತರ ಕೋರ್ಸ್‌ಗಳಿಗೆ ಸೀಮಿತ ಸೀಟುಗಳು ಮಾತ್ರ ಇವೆ. ಹೀಗಾಗಿ ರಾಜ್ಯದ ವಿದ್ಯಾರ್ಥಿಗಳ ಹಿತ ಕಾಪಾಡುವುದು ಮುಖ್ಯ' ಎಂದರು.

'ಈ ಮಸೂದೆ ಮೂಲಕ ಖಾಸಗಿ ಅನುದಾನರಹಿತ ಶಿಕ್ಷಣ ಸಂಸ್ಥೆಗಳಲ್ಲಿ

ಮುಖ್ಯಾಂಶಗಳು

- ಇನ್ನು ಪ್ರತ್ಯೇಕ ಸಿಇಟಿ ಇಲ್ಲ
- ಪಾರದರ್ಶಕತೆ ಕಾಯ್ದುಕೊಳ್ಳಲು ಸಾಧ್ಯ

ಸರ್ಕಾರದ ಪಾಲಿನ ಒಟ್ಟು ಸೀಟುಗಳ ಸಂಖ್ಯೆ ಶೇ 20ರಿಂದ 25ಕ್ಕೆ ಹೆಚ್ಚಲಿದೆ. ಖಾಸಗಿ ಮತ್ತು ಡೀಮ್ಡ್ ವಿಶ್ವವಿದ್ಯಾಲಯಗಳು ಕೂಡ ಕಾಯ್ದೆ ವ್ಯಾಪ್ತಿಗೆ ಬರುತ್ತವೆ. ಆ ಸಂಸ್ಥೆಗಳಲ್ಲಿನ ಸರ್ಕಾರಿ ಕೋಟಾ ಹೆಚ್ಚುತ್ತದೆ' ಎಂದರು.

'ಡೀಮ್ಡ್ ವಿ.ವಿಗಳಲ್ಲಿ ಶುಲ್ಕ ಹೆಚ್ಚು ಇರುವುದು ಸತ್ಯ. ಅವರು ಯುಜಿಸಿ ಅಡಿಯಲ್ಲಿ ಬರುತ್ತಾರೆ. ರಾಜ್ಯ ಸರ್ಕಾರ ಶುಲ್ಕ ನಿಗದಿಪಡಿಸಲು ಸಾಧ್ಯ ಇಲ್ಲ' ಎಂದು ಸಚಿವರು ಸ್ಪಷ್ಟಪಡಿಸಿದರು.

ವಯೋಮಿತಿ ಏರಿಕೆ: ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಹುದ್ದೆಗೆ ಗರಿಷ್ಠ ವಯೋಮಿತಿ 67 ವರ್ಷಗಳಿಗೆ ಹೆಚ್ಚಿಸುವ ಪ್ರಸ್ತಾವ ಇರುವ 'ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ (ತಿದ್ದುಪಡಿ) ಮಸೂದೆ-2017' ಅನ್ನು ಅಂಗೀಕರಿಸಲಾಯಿತು.

ಮಸೂದೆ ಮಂಡಿಸಿದ ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರಡ್ಡಿ, 'ರಾಜ್ಯದ ಎಲ್ಲ ವಿ.ವಿಗಳಲ್ಲಿ ಏಕರೂಪದ ಮಾನದಂಡ ಅನುಸರಿಸುವ ಸಲುವಾಗಿ ಈ ತಿದ್ದುಪಡಿ ತರಲಾಗಿದೆ' ಎಂದರು.

ಈ ಮಸೂದೆಗೆ ಆಕ್ಷೇಪ ವ್ಯಕ್ತಪಡಿಸಿದ ಬಿಜೆಪಿಯ ವಿಶ್ವೇಶ್ವರ ಹೆಗಡೆ ಕಾಗೇರಿ, 'ಮೂಲಸೌಲಭ್ಯ ಕೊರತೆಯಿಂದ ಸಂಸ್ಕೃತ ವಿ.ವಿ ನಲುಗಿದೆ. ಹಾಲಿ ಕುಲಪತಿ ಇದೇ ಡಿಸೆಂಬರ್‌ನಲ್ಲಿ ನಿವೃತ್ತಿಯಾಗುತ್ತಿದ್ದು, ಅವರಿಗೆ ಇನ್ನೂ ಎರಡು ವರ್ಷ ಅವಧಿ ವಿಸ್ತರಣೆಗೆ ಅವಕಾಶ ಮಾಡಿಕೊಡುವ ಉದ್ದೇಶದಿಂದ ತರಾತುರಿಯಲ್ಲಿ ಮಸೂದೆ ಮಂಡಿಸಲಾಗುತ್ತಿದೆಯೇ ಎಂಬ ಅನುಮಾನ ಬರುತ್ತಿದೆ' ಎಂದರು.

'ಈ ವಿ.ವಿಯ 49 ವಿವಿಧ ಹುದ್ದೆಗಳ ನೇಮಕಕ್ಕೆ ಅಧಿಸೂಚನೆ ಹೊರಡಿಸಲಾಗಿದ್ದು, ಈ ಹುದ್ದೆಗಳು ₹ 12 ಲಕ್ಷದಿಂದ 18 ಲಕ್ಷಕ್ಕೆ ಮಾರಾಟವಾಗುತ್ತಿದ್ದು, ತಕ್ಷಣ ನೇಮಕ ಪ್ರಕ್ರಿಯೆ ತಡೆ ಹಿಡಿಯಬೇಕು' ಎಂದು ಅವರು ಆಗ್ರಹಿಸಿದರು.

'ನೇಮಕಾತಿ ಅಧಿಸೂಚನೆ ಹೊರಡಿಸಿರುವ ವಿಷಯ ನನ್ನ ಗಮನಕ್ಕೆ ಬಂದಿಲ್ಲ. ಈ ಬಗ್ಗೆ ತಕ್ಷಣವೇ ಕ್ರಮ ತೆಗೆದುಕೊಳ್ಳುತ್ತೇನೆ' ಎಂದು ಭರವಸೆ ನೀಡಿದ ರಾಯರಡ್ಡಿ, 'ಈಗಿರುವ ಕುಲಪತಿ ಯಾರು ಎಂದೇ ನನಗೆ ಗೊತ್ತಿಲ್ಲ. ಎಲ್ಲ ವಿವಿಗಳ ಕುಲಪತಿಗಳ ವಯೋಮಿತಿ ಒಂದೇ ಇರಬೇಕು ಎಂಬ ಉದ್ದೇಶದಿಂದ ಈ ತಿದ್ದುಪಡಿ ಮಾಡಲಾಗಿದೆ' ಎಂದು ಸಮರ್ಥಿಸಿಕೊಂಡರು.

'ವಿಶ್ವವಿದ್ಯಾಲಯ ಸ್ಥಾನಮಾನ ಬೇಡ'

ಅಂತರ್ ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನ ಸಂಸ್ಥೆಗೆ 'ವಿಶ್ವವಿದ್ಯಾಲಯ' ಸ್ಥಾನಮಾನ ನೀಡುವ ತಿದ್ದುಪಡಿ ಮಸೂದೆಯನ್ನು ಆರೋಗ್ಯ ಸಚಿವ ರಮೇಶ್ ಕುಮಾರ್ ಮಂಡಿಸಿದರು.

ಅದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ವಿಶ್ವೇಶ್ವರ ಹೆಗಡೆ ಕಾಗೇರಿ, 'ವಿಶ್ವವಿದ್ಯಾಲಯಗಳು ವಿಶ್ವಾಸಾರ್ಹತೆ ಕಳೆದುಕೊಳ್ಳುತ್ತಿವೆ. ಇಂತಹ ಸಂದರ್ಭದಲ್ಲಿ ಆ ಸ್ಥಾನಮಾನ ಕೊಟ್ಟು ನಿಮ್ಮ ಕೈಯನ್ನು ಯಾಕೆ ಕಟ್ಟಿಕೊಳ್ಳುತ್ತೀರಿ. ಈ ಬಗ್ಗೆ ಪುನರ್ ವಿಮರ್ಶೆ ಮಾಡಿ' ಎಂದು ಸಲಹೆ ನೀಡಿದರು.

'ಈ ಸಂಸ್ಥೆ ಉತ್ತಮ ಕೆಲಸ ಮಾಡುತ್ತಿದೆ. ವಿಶ್ವವಿದ್ಯಾಲಯ ಸ್ಥಾನಮಾನ ನೀಡಿದರೆ ಚಟುವಟಿಕೆ ವಿಸ್ತರಿಸಲು, ಆರ್ಥಿಕ ಅನುದಾನ ಲಭ್ಯವಾಗಲು ಅನುಕೂಲವಾಗುತ್ತದೆ. ಆದರೂ, ಕಾಗೇರಿ ವ್ಯಕ್ತಪಡಿಸಿದ ಆತಂಕದ ಕಾರಣ ಈ ಬಗ್ಗೆ ಸಮಾಲೋಚನೆ ನಡೆಸಿ ಮತ್ತೆ ಮಂಡಿಸುತ್ತೇನೆ' ಎಂದು ಮಸೂದೆಯನ್ನು ಹಿಂತೆಗೆದುಕೊಂಡರು.

ಕೋಲಾರ ಪತ್ರಿಕೆ

ಅರಸು ವಿ.ವಿ.ಯ ಏಳನೇ ಘಟಿಕೋತ್ಸವ

ಕೋಲಾರದ ಹೊರವಲಯದ ಟಮಕದ ದೇವರಾಜ ಅರಸು ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ ರಜತ ಮಹೋತ್ಸವ ಸಭಾಂಗಣದಲ್ಲಿ ಇಂದು ಬೆಳಿಗ್ಗೆ ೧೧ ಘಂಟೆಗೆ ದೇವರಾಜ ಅರಸು ಹಿಂದುಳಿದ ವರ್ಗಗಳ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಆರ್.ಎಲ್. ಜಾಲಪ್ಪ ಅಧ್ಯಕ್ಷತೆಯಲ್ಲಿ ಜಯದೇವ ಹೃದ್ರೋಗ ಆಸ್ಪತ್ರೆಯ ನಿರ್ದೇಶಕ ಡಾ|| ಸಿ.ಎನ್. ಮಂಜುನಾಥ್‌ರಿಂದ ಏಳನೇವಾರ್ಷಿಕ ಘಟಿಕೋತ್ಸವದ ಪ್ರಧಾನ ಭಾಷಣ, ಅರಸು ವಿ.ವಿ. ಕುಲಪತಿ ಡಾ|| ಎಸ್. ಕುಮಾರ್‌ರಿಂದ ಪದವಿ ಪ್ರದಾನ, ಉಪಕುಲಪತಿ ಡಾ|| ಸಿ.ವಿ. ರಘುವೀರ್ ಉಪಸ್ಥಿತರು.

ಎಕ್ಸಲೆಂಟ್‌ಕಾಲೇಜಿನ